ಸ್ತ್ರೀಶಕ್ತಿಯಲ್ಲಿ ಬೊಂಬೆ ಮಾಡೋದು ಹೇಳಿಕೊಡಲು ಬಂದಿದ್ದೇನೆ...

ನಾನು ನಿಂತಲೇ ನಿಂತೆ.

ಕುಳಿತಲ್ಲಿಂದಲೇ ಕೈ ಮುಂದೆ ಮಾಡಿ ವಿಶ್ವಾಸನ ಕೈ ಕುಲುಕಿದರು.

ಅತ್ತೆಯೂ ಈ ಮನೆಗೆ ಸೊಸೆಯಾಗಿಯೇ ಬಂದವರು. ಅಜ್ಜಿ ಕೂಡ ಅಷ್ಟೇ ಅಲ್ಲವೇ.... ಅವರಿಬ್ಬರು ಬೇರು ಬಿಟ್ಟರು. ಈ ಮನೆಯನ್ನು ತಮ್ಮದು ಎಂದು ಮಾಡಿಕೊಂಡರು ನನಗೇಕೆ ಆಗುತ್ತಿಲ್ಲ?.. ಎರಡು ಮಕ್ಕಳಿವೆ. ಮಕ್ಕಳು ನನ್ನವು.. ನನ್ನ ಗರ್ಭದಲ್ಲಿ ಮೂಡಿ ನನ್ನ ಸತ್ವವನ್ನು ಹೀರಿ ಬೆಳೆದು ನನ್ನ ಸೀಳಿ ಆಚೆ ಬಂದವರು.

ಗರ್ಭದ ಗೋಡೆಗೆ ಕಚ್ಚಿಕೊಳ್ಳುವ ಭ್ರೂಣವನ್ನು ಮೊದಲು ಹೊರನೂಕಲು, ಕಿತ್ತು ಹಾಕಲು ಪ್ರಯತ್ನಿಸುವುದಂತೆ ತಾಯಿ ಜೀವ ನಂತರ ಅದು ತನ್ನದೇ ಒಂದು ಭಾಗ ಎಂದು ಅರಿವಾಗಿ ಅತ್ಯಂತ ಪ್ರೀತಿಯಿಂದ ಆರೈಕೆಮಾಡಿ ತನಗೂ ಇಟ್ಟುಕೊಳ್ಳದೆ ಸತ್ವವನ್ನೆಲ್ಲಾ ಧಾರೆ ಎರೆದು ಪೊರೆಯುತ್ತದೆ ಹೆಣ್ಣು ದೇಹ. ಒಂಭತ್ತು ತಿಂಗಳುಗಳ ಕಾಲ ಭ್ರೂಣ ಮಗುವಾಗಿ.... ಒಳಗಿರಲಾರದೆ ಗರ್ಭ ಸೀಳಿಕೊಂಡು ಆಚೆ ಬರುತ್ತದೆ. ತಾಯಿ ಸಾಕು.. ಎಂದು ಆಚೆ ನೂಕುವುದಿಲ್ಲ... ಮಗು... ಬೇಕು ಎಂದು ಆಚೆ ಬರುತ್ತದೆ, ಆ ತಾಯಿ ತನ್ನ ನೋವು, ಅಸಹ್ಯ, ಹೇಸಿಗೆ, ನಾಚಿಕೆ... ಎಲ್ಲವನ್ನು ಮರೆತು ಹೊರಬಂದ ಪುಟ್ಟ ಜೀವಕ್ಕೆ ಹಾಲುಣಿಸಿ ಬೆಳೆಸುತ್ತಾಳೆ ಅದು ತಾಯಿಯ ಕರ್ತವ್ಯ.. ನಿಷ್ಕಾಮದಿಂದ ತನ್ನ ಕರ್ತವ್ಯಕ್ಕೆ ಮಮತೆಯ ಲೇಪವನ್ನೂ ಹಚ್ಚಿ ಪೊರೆಯುತ್ತಾಳೆ ತಾಯಿ... ಅಷ್ಟೆಲ್ಲಾ ಮಾಡಿದರೂ ಆ ಮಕ್ಕಳಿಗೆ ತಂದೆಯ ಹೆಸರು... ಅವನ ಮನೆಯೇ ಅವರ ಮನೆ.. ಹುಟ್ಟಿದ ಮನೆ ಬಿಟ್ಟು ಬರುವ ಹೆಣ್ಣಿಗೆ ಮನೆ ಯಾವುದು?...

ಅತ್ತೆ ಸೊಸೆಯರಿಗೆ ಜಗಳವಾಗುವುದೇ ಅದಕ್ಕೇನೋ... ಇಬ್ಬರೂ ತಮ್ಮ ತಮ್ಮ ಹುಟ್ಟಿದ ಮನೆ ಬಿಟ್ಟು ಬಂದವರು.. ಹುಟ್ಟಿ ಬಂದದ್ದು ಸಹಜವಾಗಿ ನಮ್ಮದಾಗುತ್ತದೆ.... ಅದನ್ನು ಬಿಟ್ಟು ಬೇರೆಯದನ್ನು ತನ್ನದಾಗಿ ಮಾಡಿಕೊಳ್ಳುವುದು ಮೊದಲೇ ಕಷ್ಟ.. ಕಷ್ಟಪಟ್ಟು ಮಾಡಿಕೊಂಡು, ಮಗನನ್ನು ಹೆತ್ತು ಬೆಳೆಸಿ... ಎಲ್ಲಾ ತನ್ನದು ಎಂಬ ವಿಶ್ವಾಸ ಬೆಳೆಸಿಕೊಳ್ಳುವ ಹೊತ್ತಿಗೆ ಮಗನ ಮಡದಿ ಬಂದು.. ಅವಳ ಹಕ್ಕು ಸ್ಥಾಪಿಸಲು ಮೊದಲು ಮಾಡುತ್ತಾಳೆ.... ಆಗ... ಆಗ ಸಹಜವಾಗಿಯೇ ಅವಳ ಮೇಲೆ ಕೋಪ.. ಕೋಪದಿಂದ ದ್ವೇಷ... ದ್ವೇಷದಿಂದ ಜಿದ್ದು... ತನ್ನ ಮನೆಯಲ್ಲಿಯೇ ಕೂತಿರುವ ಗಂಡಸಿಗೆ ಇವೆಲ್ಲಾ ಅರ್ಥವಾಗುವುದು ಕಷ್ಟ.

ಹೆಣ್ಣು ತನ್ನ ಮನೆಯನ್ನು ಬಿಟ್ಟಂತೆ ಗಂಡು ಕೂಡ ತನ್ನ ಮನೆಯನ್ನು ಬಿಟ್ಟು ಇಬ್ಬರೂ ಬೇರೆಯದೆ ಒಂದು ಮನೆಯಲ್ಲಿ ಬದುಕು ಪ್ರಾರಂಭಿಸಿದರೆ ಇಷ್ಟೊಂದು ಅಸಹಾಯಕತೆ ಹೆಣ್ಣಿಗೆ ಇರುವುದಿಲ್ಲವೇನೋ....

## ಮನೆ ತೊರೆಯುವ ನಿರ್ಧಾರ

ಹೌದೇ?... ಇಷ್ಟೆಯೇ?.... ನನ್ನದೇ ಪರಿಸ್ಥಿತಿಯಲ್ಲಿ ಇರುವ ಹೆಂಗಸರೆಲ್ಲಾ ನನ್ನ ಹಾಗೆ ಯೋಚಿಸುತ್ತಾರೆಯೇ?.... ಜೊತೆಗೆ ನನ್ನ ಪ್ರಾಬ್ಲಂ... ಅತ್ತೆಯದಕ್ಕಿಂಥ ಇವರದೇ..! ನನ್ನ ಮಾತು, ಅಭಿಪ್ರಾಯಕ್ಕೆ ಬೆಲೆ ಕೊಡುವುದಿರಲಿ... ಗಣನೆಗೇ ತೆಗೆದುಕೊಳ್ಳುವುದಿಲ್ಲ... ನಿಕೃಷ್ಟತೆ...! ಇದ್ದು ಇಲ್ಲದರ ಭಾವ...ಹೊರಟು ಬಿಡಬೇಕು...

ನಾನೇ ಜವಾಬ್ದಾರಿ ತೆಗೆದುಕೊಂಡು ಕಟ್ಟಿದ ಸ್ತ್ರೀ ಶಕ್ತಿಯ ಗತಿ?...

ಚಾಚಿದ ಕಾಲನ್ನು ಮಡಚಿ ಬುಡಕ್ಕೆ ಇಟ್ಟುಕೊಂಡು ಮುದುಡಿ ಕುಳಿತೆ.

ರಾತ್ರಿಯ ಕತ್ತಲು.... ಪೂರಾ ಕತ್ತಲಾಗಿ ಉಳಿದಿರಲಿಲ್ಲ... ಬೀದಿ ದೀಪದ ಬೆಳಕು ಅತ್ತೆಯ ಕೋಣೆಯ ಅರೆ ತೆರೆದ ಬಾಗಿಲಿನಿಂದ ಬರುತ್ತಿರುವ ಬೆಳಕು ದೇವರ ಕೋಣೆಯ ನಂದಾದೀಪದ ಬೆಳಕು... ಮಕ್ಕಳ ಕೋಣೆಯ ತೆರೆದ ಬಾಗಿಲಿನಿಂದ ಬರುತ್ತಿರುವ ರಾತ್ರಿ ದೀಪದ ಬೆಳಕು.. ಎಲ್ಲಾ ಸೇರಿ ಒಂದು ರೀತಿಯ ಬೆಳದಿಂಗಳ ಬೆಳಕು ಹರಡಿತ್ತು ಹಾಲಿನಲ್ಲಿ ಮಂದ ಬೆಳಕು ಮನಸ್ಸಿಗೆ ಮುದ ನೀಡಿತು.

ಮೀರಾ, ನರಹರಿ ಸಾಕು.. ಸ್ತ್ರೀಶಕ್ತಿಗೆ, ಆಗದಿದ್ದರೆ ನಿಂತು ಹೋಗಲಿ... ಸ್ವಂತ ಮಕ್ಕಳನ್ನೇ ಬಿಟ್ಟು ಹೋಗಲು ನಿಂತಿರುವಾಗ ಸ್ತ್ರೀ ಶಕ್ತಿ ತಡೆಯೊಡ್ಡುವುದೇ? ಕಂಗಳನ್ನು ಗಟ್ಟಿಯಾಗಿ ಮುಚ್ಚಿ ತೆರೆದೆ. ಸ್ತ್ರೀ ಶಕ್ತಿ ನೂರಾರು ಅಶಕ್ತ ಸ್ತ್ರೀಯರನ್ನು ಶಕ್ತಿಯುತರಾಗಿ ಮಾಡಿರುವುದು ಸುಳ್ಳಲ್ಲ... ಅವರಲ್ಲೇ ಒಂದಿಬ್ಬರನ್ನು ಸೇರಿಸಿಕೊಂಡು ಒಂದು ಟ್ರಸ್ಟ್ ತರಹ ಮಾಡಿಕೊಂಡು ವ್ಯವಹಾರ ಮುಂದುವರಿಸಲು ಹೇಳಬೇಕು ಮೀರಾಗೆ ರಾಜಕೀಯಕ್ಕೆ



## ಇಲ್ಲಿಯವರೆಗೆ

ಪ್ರೆಸ್‌ಮೀಟ್ ಮುಗಿಸಿ ಹೋಟೆಲ್‌ನಲ್ಲಿಯೇ ಉಳಿದುಕೊಂಡ ಅವಳಿಗೆ ಗಂಡ ಜತೆಯಲ್ಲೇ ಇದ್ದರೂ ಒಂಟಿತನ ಕಾಡುತ್ತದೆ. ಒಡವೆ ಖರೀದಿಗಾಗಿ ಆಭರಣ ಅಂಗಡಿಗೆ ಹೋಗಿ ವಜ್ರದ ಪೆಂಡೆಂಟ್ ಕೊಡಿಸಿದರೂ ಆಕೆಗೆ ತೃಪ್ತಿ ಆಗಲಿಲ್ಲ. ಸ್ತ್ರೀಶಕ್ತಿ ಸಂಘದ ವತಿಯಿಂದ ಬೊಂಬೆ ತರಬೇತಿ ನೀಡಲು ಬಂದ ವಿಶ್ವಾಸ್ ಮನೆಗೆ ಬರುತ್ತಾನೆ. ಗಂಡನಿಗೆ ಪರಿಚಯಿಸಿದಾಗ ಆತ ವಿಕ್ರಮ್‌ನನ್ನು ಎಲ್ಲೋ ನೋಡಿದ ಹಾಗೆ ಇದೆ ಎನ್ನುತ್ತಾನೆ. ಮನೆಯಲ್ಲಿ ಇಬ್ಬರೂ ಮಾತನಾಡುತ್ತಾ ಕಾಲ ಕಳೆಯುತ್ತಾರೆ. ಲೈಬ್ರರಿ ಪುಸ್ತಕ ಓದಲು ಬೇಕು ಎಂದು ವಿಶ್ವಾಸ್ ಕೇಳುತ್ತಾನೆ. ರಾಧಿಕಾ, ರಾಹುಲ್ ಇಬ್ಬರಿಗೂ ಹೊಸ ಅಂಕಲ್ ಇಷ್ಟವಾಗುತ್ತಾರೆ. ಅವರೊಂದಿಗೆ ಕ್ರಿಕೆಟ್ ಆಟಕ್ಕೆ ತೊಡಗುತ್ತಾರೆ.

ಇಳಿಯುತ್ತಿರುವ ಇವರಿಗೆ ಸ್ತ್ರೀಶಕ್ತಿ ಅವಶ್ಯಕವಾಗಿ ಬೇಕು... ಮೊನ್ನೆ ರಾಜಕೀಯಕ್ಕೆ ಸೇರಿದಾಗ ನಡೆದಾದ ಪತ್ರಿಕಾಗೋಷ್ಠಿಯಲ್ಲಿ ಮುಖ್ಯಮಂತ್ರಿಗಳು ಕೂಡ ಸ್ತ್ರೀಶಕ್ತಿಯ ಬಗ್ಗೆ ಮಾತಾಡಿದರು. ಹಾಗಾಗಿ ಸ್ತ್ರೀಶಕ್ತಿಗೆ ಇವರ ಬೆಂಬಲ ಇರುತ್ತದೆ...

ನಾಳೆಯೇ ಹೊರಟುಬಿಡಬೇಕು. ನಿರ್ಧಾರ ಗಟ್ಟಿಯಾಗುತ್ತಿದ್ದಂತೆ ಮನಸ್ಸು ನಿರಾಳವಾಯಿತು.

* * *

ನನಗೆ ಪ್ರೀತಿ ನಂಬರ್ ಸಿಕ್ತಾ ಇಲ್ಲ... ಬೆಳಗ್ಗೆಯಿಂದ ಮಾಡ್ತಾ ಇದೀನಿ... ನಂಬರ್ ಬದಲಿಸಿದಾಳಾ?... ಬೊಂಬೆ ಮಾಡುವ ಕ್ಲಾಸು ಶುರುವಾಗುವ ಮುನ್ನ ಶಾಲೆಯ ಬಳಿ ಹೋಗಿ ವಿಶ್ವಾಸನನ್ನು ಭೇಟಿ ಮಾಡಿ ಕೇಳಿದೆ.

ಯಾಕ್ರೀ?... ಬೊಂಬೆ ಮಾಡುವುದನ್ನು ಹೇಳಿಕೊಡಲು ಬಂದಿರುವವ ಸರೀಗಿಲ್ಲ... ಅಂತ ಅವಳ್ಗೆ ಬೆಂಡೆತ್ತುತೀರೇನ್ರೀ?...

ಅಸಹನೆಯಿಂದ ವಿಶ್ವಾಸನತ್ತ ನೋಡಿದೆ.

ನಿಮ್ಮನ್ನು ಬಿಟ್ರೆ ನಿಮಗೆ ಪ್ರಪಂಚದಲ್ಲಿ ಬೇರೆ ಏನೂ ಇಲ್ವಾ?... ಎಲ್ಲಾ ನಿಮ್ಮ ಸುತ್ತಲೇ ಇರುತ್ತೆ ಅಂತ ಯಾಕೆ ಯೋಚಿಸ್ತೀರಿ?..

ಅರೆ ಪ್ರಪಂಚ ಇರೋದೇ ಹಾಗೆ... ಈಗಿನ ಕಾಲದಲ್ಲಿಯಂತೂ ಹೆಚ್ಚಿನ ಜನ ಯೋಚಿಸೋದೇ ಹಾಗೆ..

ಉಗುಳು ನುಂಗಿ ಕಣ್ಣರಳಿಸಿ ಅವನತ್ತ ನೋಡಿದೆ, ಎದೆ ಬಿಗಿದು ಬಂತು...

ಅರ್ಥ ಆಗಲಿಲ್ಲವೇ?.... ಎಲ್ಲದರ ಆದಿ ಹಾಗೂ ಅಂತ್ಯ ನಾನೇ ಎಂದು ಹೆಚ್ಚಿನ ಮಂದಿ ತಿಳಿದಿದ್ದಾರೆ... ಹಾಗಿರಬೇಕೆಂದು ಆಶಿಸುತ್ತಾರೆ... ನಾನೂ ಅವರಲ್ಲಿ ಒಬ್ಬ...!

ಅರ್ಥ ಆಯ್ತು.... ಹಾಗೆ ಅಂದುಕೊಳ್ಳದೆ ಇಷ್ಟು ವರ್ಷ ಬಾಳಿದ್ದು ನನ್ನ ಬದುಕಿನ ದುರಂತ.... ಆದಿಯೂ ನಾನೇ ಅಂತ್ಯವೂ ನಾನೇ ಅನ್ನುವುದು ಶ್ರೀ ಕೃಷ್ಣ ಪರಮಾತ್ಮ ಭಗವದ್ಗೀತೆಯಲ್ಲಿ ಹೇಳಿದ್ದು ಅಂತ ಕೇಳಿದ್ದೆ, ಮನುಷ್ಯರೂ ಹಾಗೇ ಅಂದುಕೊಂಡು ಜೀವಿಸಬೇಕು ಅಂತ ನನಗೆ ಗೊತ್ತಿರಲಿಲ್ಲ... ಪ್ರೀತಿ ನಂಬರ್ ಇದ್ಯ.... ?

ಅರೆ... ನನ್ನ ಮೇಲೆ ಯಾಕೆ ಕೋಪ? ನಿಮ್ಮ ಮೊಬೈಲ್‌ಗೆ ಬಿಸಿನೆಸ್ ಕಾರ್ಡ್